ಅಸಲುದಾವಾ ಸಂಖ್ಯೆ **57/2022**
**ಪಿ.ಡಬ್ಲ್ಯೂ.1**

ಮಧ್ಯಂತರ ಅರ್ಜಿ ನಂ. **13** ಮತ್ತು **14** ಮೇಲೆ ಆದ ಆದೇಶದ ಮೇರೆಗೆ

ಇಂದು ದಿನಾಂಕ **12-02-2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ವ್ಯವಸಾಯ ಮಾಡುತ್ತೇನೆ. ನಾನು ಪ್ರಾಥಮಿಕ ತರಗತಿವರೆಗೆ ಓದಿರುತ್ತೇನೆ. ನನಗೆ ಇಂಗ್ಲೀಷ ಭಾಷೆ ಓದಲು ಬರುವುದಿಲ್ಲಾ, ಆದರೆ ಸಹಿ ಮಾಡಲು ಮಾತ್ರ ಬರುತ್ತದೆ. FDP No. **1/1999** ಪ್ರಕರಣದಲ್ಲಿ ಯಲ್ಲವ್ವಳು ಪ್ರತಿವಾದಿ ಆಗಿದ್ದಳು ಎಂದರೆ ನಿಜ. ಯಲ್ಲವ್ವ ಬುದ್ದಿವಂತಪ್ಪನ ಹೆಂಡತಿ ಆಗಿದ್ದಳು ಎಂದರೆ ನಿಜ. ಯಲ್ಲವ್ವಳು ನಾರಾಯಣ, ಸೊಮಣ್ಣಾ, ಮೋಹನ ಇವರ ಮಲತಾಯಿ ಆಗಿದ್ದಳು ಎಂದರೆ ಸರಿಯಲ್ಲಾ ಆದರೆ ಅವಳು ಅವರ ದೊಡ್ಡವ್ವ ಆಗಿದ್ದಳು. ಸದರೀ ನಾರಾಯಣ, ಸೋಮಣ್ಣಾ ಮತ್ತು ಮೋಹನ ಇವರು ಕೆಂಚವ್ವ ಉರ್ಫ ಗಂಗವ್ವ ಇವರ ಮಕ್ಕಳು ಎಂದರೆ ನನಗೆ ಗೊತ್ತಿಲ್ಲಾ. ಸದರೀ ಕೆಂಚವ್ವ ರಾಣೆಬೆನ್ನೂರಿನವಳು ಎಂದರೆ ನನಗೆ ಗೊತ್ತಿಲ್ಲಾ.

ಯಲ್ಲವ್ವ ದಿಃ **26-07-2018** ರಂದು ಮೃತಪಟ್ಟಿರುತ್ತಾಳೆ. ಅವಳು ತಡಸಿನಕೊಪ್ಪ ಗ್ರಾಮದ ನನ್ನ ಮನೆಯಲ್ಲಿ ಮೃತಪಟ್ಟಿರುತ್ತಾಳೆ. ಅವಳು ನವಲೂರಿನಲ್ಲಿ ಮೃತಪಟ್ಟಿರುತ್ತಾಳೆ ಎಂದರೆ ಸರಿಯಲ್ಲಾ ಆದರೆ ಅವಳ ಅಂತ್ಯಕ್ರಿಯೇ ನವಲೂರಿನಲ್ಲಿ ಮಾಡಿರುತ್ತೇವೆ. ಯಲ್ಲವ್ವಳು ಹನುಮಂತಪ್ಪ, ಶೇಖಪ್ಪ ಮತ್ತು ನಿಂಗಪ್ಪ ಇವರೊಂದಿಗೆ

ನವಲೂರಿನಲ್ಲಿ ವಾಸ ಇದ್ದಳು ಎಂದರೆ ಸರಿಯಲ್ಲಾ. ಅವಳು ಸದರೀಯವರ ಮನೆಯಲ್ಲಿಯೇ ಮೃತಪಟ್ಟಳು ಎಂದರೆ ಸರಿಯಲ್ಲಾ. ಯಲ್ಲವ್ವಳ ಮರಣ ಉತಾರದಲ್ಲಿ ಅವಳು ಮೃತಪಟ್ಟ ಸ್ಥಳ ನವಲೂರು ಚಾವಣಿ ಎಂದು ಕಾಣಿಸಲಾಗಿದೆ ಎಂದರೆ ನಿಜ. ಯಲ್ಲವ್ವಳಿಗೆ ನನ್ನ ಮೇಲೆ ಯಾವುದೇ ಪ್ರೀತಿ ವಿಶ್ವಾಸ ಇರಲಿಲ್ಲಾ ಎನ್ನುವುದು ಸರಿಯಲ್ಲಾ.

ಯಲ್ಲವ್ವಳು ದಿಃ **25-07-2018** ರಂದು ನನಗೆ ಮೃತ್ಯು ಪತ್ರ ಮಾಡಿಕೊಟ್ಟಿದ್ದಾಳೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ. ಸದರೀ ದಾಖಲೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲಾ. ಮೃತ್ಯು ಪತ್ರದ ಮೇಲಿರುವ ಹೆಬ್ಬಟ್ಟಿನ ಸಹಿ ಯಲ್ಲವ್ವಳ ಹೆಬ್ಬಟ್ಟಿನ ಸಹಿ ಆಗಿರುವುದಿಲ್ಲಾ ಎಂದರೆ ಸರಿಯಲ್ಲಾ. ದಿಃ **25-07-2018** ರಂದು **1** ರಿಂದ **3**ನೇ ಪ್ರತಿವಾದಿಯರು ಯಲ್ಲವ್ವಳನ್ನು ಸಿವಿಲ್ ಆಸ್ಪತ್ರೆಗೆ ತೋರಿಸಲು ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲಾ. ಸದರೀ ಆಸ್ಪತ್ರೆಯಲ್ಲಿ ಅವಳನ್ನು ಹೊರ ರೋಗಿ ಎಂದು ನಮೂದಿಸಿದ್ದರು ಎಂದರೆ ಸರಿಯಲ್ಲಾ. ಯಲ್ಲವ್ವ ಮೃತಪಟ್ಟ ನಂತರ ಅವಳ ಅಂತ್ಯಕ್ರಿಯೆಯ ಸಂಪೂರ್ಣ ಖರ್ಚು ವೆಚ್ಚವನ್ನು **1**ನೇ ಪ್ರತಿವಾದಿಯೇ ಮಾಡಿರುತ್ತಾನೆ ಎಂದರೆ ಸರಿಯಲ್ಲಾ. ನಾನು ಅವಳ ಅಂತ್ಯಕ್ರಿಯೆಗೂ ಸಹ ಹೋಗಿಲ್ಲಾ ಎಂದರೆ ಸರಿಯಲ್ಲಾ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ವ ಹಿತಾಸಕ್ತಿ ಇಲ್ಲಾ ಮತ್ತು ದಾವಾ ನನಗೆ ಸಂಬಂದ ಇಲ್ಲಾ ಎಂದರೆ ಸರಿಯಲ್ಲಾ. **1** ಮತ್ತು **2**ನೇ ಪ್ರತಿವಾದಿ ಹಾಗೂ ನಿಂಗರಾಜ ನನಗೆ ದಾವಾ ಆಸ್ತಿಯನ್ನು ಯಾವತ್ತೂ

ಹಸ್ತಾಂತರಿಸಿಲ್ಲಾ ಎಂದರೆ ಸರಿಯಲ್ಲಾ, ಹಾಗೂ ನನಗೆ ಅವರೊಂದಿಗೆ ಯಾವುದೇ ವ್ಯವಹಾರ ಇರುವುದಿಲ್ಲಾ.

ಉಪ ವಿಭಾಗಾಧಿಕಾರಿಗಳ ಮುಂದೆ ಇದ್ದ ಮೇಲ್ಮನವಿಯ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸದರೀ ಪ್ರಕರಣಗಳು ನನ್ನ ವಿರುದ್ದ ಆಗಿರುತ್ತವೆ ಎಂದರೆ ಸರಿಯಲ್ಲಾ. ಸದರೀ ಆದೇಶಗಳ ವಿರುದ್ದ ಪ್ರತಿವಾದಿಗಳು ಮೇಲ್ಮನವಿ ಸಲ್ಲಿಸಿರುವುದಿಲ್ಲಾ. ದಾವಾ ಆಸ್ತಿಯ ಕಬ್ಜೆಯಲ್ಲಿ **1** ಮತ್ತು **2** ನೇ ಪ್ರತಿವಾದಿಗಳು ಇರುತ್ತಾರೆ ಎಂದರೆ ಸರಿಯಲ್ಲಾ. ಮೃತ್ಯುಪತ್ರದ ಸಾಕ್ಷಿದಾರ ಲಕ್ಷ್ಮಣ ಅಂಜನಪ್ಪ ಶಿವಮ್ಮನವರ ಇತನು **3** ನೇ ಪ್ರತಿವಾದಿಯ ಮಗ ಎಂದರೆ ನಿಜ. ಆತನ ಸಾಕ್ಷಿಯನ್ನು ಮಾಡಿಸುತ್ತೇನೋ ಇಲ್ಲವೋ ಎಂಬುದನ್ನು ನನ್ನ ವಕೀಲರಿಗೆ ಕೇಳಿ ನಿರ್ಧರಿಸಿಸುತ್ತೇನೆ. ಈ ದಾವೆ ಹೂಡಲು ಯಾವುದೇ ಕಾರಣ ಉಂಟಾಗಿಲ್ಲಾ ಎಂದರೆ ಸರಿಯಲ್ಲಾ.

**1** ನೇ ಪ್ರತಿವಾದಿಯ ತಂದಗೆ ಗಂಗಪ್ಪನಿಗೆ **5** ಜನ ಗಂಡು ಮಕ್ಕಳು ಹಾಗೂ **4** ಜನ ಹೆಣ್ಣು ಮಕ್ಕಳು ಎಂದರೆ ನಿಜ. ಆತನ **4** ಜನ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲಾ ಎಂದರೆ ನಿಜ. ಆಸ್ತಿ ಕೇವಲ ಗಂಡು ಮಕ್ಕಳಿಗೆ ದೊರೆಯಲಿ ಎಂಬ ಕಾರಣಕ್ಕೆ ನಾನು ಉದ್ದೇಶಪೂರ್ವಕವಾಗಿ ಹೆಣ್ಣು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲಾ ಎಂದರೆ ಸರಿಯಲ್ಲಾ. ಯಲ್ಲವ್ವ ಒಂದು ಮೃತ್ಯು ಪತ್ರವನ್ನು ಮಾಡಿದ್ದು ಅದರಂತೆ ಆಸ್ತಿಯು ಕೇವಲ ಗಂಡು ಮಕ್ಕಳಿಗೆ ಹೋಗಬೇಕು ಎಂದು ಕಾಣಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲಾ. ಸದರೀ  ಮೃತ್ಯು ಪತ್ರವನ್ನು ಯಲ್ಲವ್ವಳು ನೊಂದಣಿ ಸಹ

ಮಾಡಿಸಿದ್ದಳು ಎಂದರೆ ನನಗೆ ಗೊತ್ತಿಲ್ಲಾ. ಯಲ್ಲವ್ವ ವ್ಯವಹಾರ ಜ್ಞಾನ ಹೊಂದಿದ್ದಳು ಎಂದರೆ ನಿಜ. ಅವಳು ತಹಶೀಲ್ದಾರ ಕಚೇರಿ, ನೊಂದಣಿ ಕಚೇರಿಗಳಿಗೆ ಓಡಾಡುತ್ತಿದ್ದಳು ಎಂದರೆ ನಿಜ. ಮೊದಲಿನ ಮೃತ್ಯು ಪತ್ರದ ಬಗ್ಗೆ ನಾನು ಆಧರಿಸುವ ಮೃತ್ಯುಪತ್ರದಲ್ಲಿ ಉಲ್ಲೇಖ ಇರುವುದಿಲ್ಲಾ ಎಂದರೆ ಸರಿಯಲ್ಲಾ. ಮೃತ್ಯು ಪತ್ರವನ್ನು ನಾನೇ ಸೃಷ್ಟಿಸಿ ಅದರಲ್ಲಿ ನನ್ನ ಊರನ್ನು ತಡಸಿನಕೊಪ್ಪ ಎಂದು ಕಾಣಿಸುವ ಬದಲು ನವಲೂರು ಎಂದು ಕಾಣಿಸಿದ್ದೇನೆ ಎಂದರೆ ಸರಿಯಲ್ಲಾ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ
ಧಾರವಾಡ